ಗೌರವ ಧನ ಮಂಜೂರಾತಿಯಲ್ಲಿ ಬಹಳಷ್ಟು ಬೋಗಸ್ ಆಗಿದೆ ಎಂದು ಭ್ರಷ್ಟಾಚಾರ ಆಗಿದೆ ಎಂದು ದೂರು ಬಂದ ಕಾರಣ ಹಾಗೂ ಸಾಕ್ಷ್ಯಾಧಾರಗಳಿಲ್ಲದೆ ಗೋವಾ ಚಳುವಳಿಯಲ್ಲಿ ಭಾಗವಹಿಸಿದ್ದೇವೆಂದು ಸಾವಿರಾರು ಜನ ಅರ್ಜಿಗಳನ್ನು ಸಲ್ಲಿಸಿ ಗೌರವಧನ ಮಂಜೂರು ಮಾಡಬೇಕೆಂದು ಒತ್ತಾಯಿಸುತ್ತಿದ್ದುದರಿಂದ ಗೋವಾ ವಿಮೋಚನಾ ಚಳುವಳಿಗಾರರಿಗೆ ಗೌರವಧನ ಮಂಜೂರು ಮಾಡುವ ಯೋಜನೆಯನ್ನು 19-4-1995ರಿಂದ ರದ್ದುಗೊಳಿಸಿದೆ.

ಕನ್ನಡ ಶೀಘ್ರಲಿಪಿಗಾರರ ಹಾಗೂ ಬೆರಳಚ್ಚುಗಾರರ ನೇಮಕಾತಿ

2306 - ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದ ವಿವಿಧ ಇಲಾಖೆಗಳಲ್ಲಿ ಕನ್ನಡ ಬೆರಳಚ್ಚುಗಾರರ ಹಾಗೂ ಕನ್ನಡ ಶೀಘ್ರಲಿಪಿಗಾರರ ಖಾಲಿಯಿರುವ ಹುದ್ದೆಗಳ ಸಂಖ್ಯೆ ಎಷ್ಟು?

ಆ) ಈ ಕನ್ನಡ ಶೀಘ್ರಲಿಪಿಗಾರರ ಹಾಗೂ ಬೆರಳಚ್ಚುಗಾರರ ಅಗತ್ಯವಿದ್ದರೂ ಈವರೆಗೂ ನೇಮಕ ಮಾಡಿಕೊಳ್ಳದಿರಲು ಕಾರಣಗಳೇನು?

ಇ) ಕನ್ನಡ ಶೀಘ್ರಲಿಪಿಗಾರರ ಹಾಗೂ ಕನ್ನಡ ಬೆರಳಚ್ಚುಗಾರರ ಹುದ್ದೆಗಳನ್ನು ಸರ್ಕಾರ ಯಾವಾಗ ಭರ್ತಿ ಮಾಡುವುದು, ವಯೋಮಿತಿ ಮೀರಿದವರಿಗೆ ಆದ್ಯತೆ ನೀಡುವುದೇ?

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) :

ಅ) ಶೀಘ್ರಲಿಪಿಗಾರರು - 422

ಬೆರಳಚ್ಚುಗಾರರು - 1116

ಆ) ಮೀಸಲಾತಿ ನೀತಿಯು ಹಲವಾರು ಬಾರಿ ಬದಲಾವಣೆಗೊಳಪಟ್ಟಿದ್ದರಿಂದ, ಇವುಗಳನ್ನು ತುಂಬಲಾಗಲಿಲ್ಲ. ಸರ್ವೋಚ್ಚ ನ್ಯಾಯಾಲಯದ ನಿರ್ದೇಶನದ ಆಧಾರದ ಮೇಲೆ, ನೇರ ನೇಮಕಾತಿಗೆ ಪರಿಷ್ಕೃತ ಮೀಸಲಾತಿ ರೋಸ್ಟರನ್ನು ಸರ್ಕಾರಿ ಆದೇಶ ಸಂಖ್ಯೆ : ಸಿಆಸುಇ 8 ಸೆಹಿಮ 95 ದಿನಾಂಕ 20-6-1995ರಲ್ಲಿ ನಿಗಧಿಪಡಿಸಲಾಗಿದೆ.

ಇ) ಹೊಸ ಮೀಸಲಾತಿಯ ಪ್ರಕಾರ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು, ಕ್ರಮ ಜರುಗಿಸಲಾಗುತ್ತಿದೆ. ವಯೋಮಿತಿ ಮೀರಿದವರಿಗೆ ಆದ್ಯತೆ ನೀಡುವ ಬಗ್ಗೆ ಪರಿಶೀಲಿಸಲಾಗುವುದು.

ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯಗಳು

(ಅ) ಕುಡಿಯುವ ನೀರಿನ

ಅಧ್ಯಕ್ಷರು : ಸನ್ಮಾನ್ಯ ವಾ. ನಾಗರಾಜ್‌ರವರೇ ಕುಡಿಯುವ ನೀರಿನ ಸಮಸ್ಯೆಯ ಬಗ್ಗೆ ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಲು ಅವಕಾಶವನ್ನು ಕೇಳಿದ್ದೀರಿ. ದಯವಿಟ್ಟು ಪ್ರಸ್ತಾಪ ಮಾಡಿ.

+ ಶ್ರೀ ವಾಟಾಳ್ ನಾಗರಾಜ್ : ಸನ್ಮಾನ್ಯ ಅಧ್ಯಕ್ಷರೇ, ಸುಮಾರು 16 ಕುಡಿಯುವ ನೀರಿನ ಯೋಜನೆಗಳಿಗೆ ಸನ್ಮಾನ್ಯ ವೀರೇಂದ್ರ ಪಾಟೀಲರು ಮುಖ್ಯಮಂತ್ರಿಯಾಗಿದ್ದ ಕಾಲದಲ್ಲಿ ಶಂಕು ಸ್ಥಾಪನೆಯನ್ನು ಮಾಡಿ ಅಲ್ಲಲ್ಲಿ ಕೆಲಸಗಳನ್ನು ಪ್ರಾರಂಭ ಮಾಡಿದ್ದರು. ಅದರಲ್ಲಿ ಚಾಮರಾಜನಗರ, ಶಿವಮೊಗ್ಗ ಸೇರಿದಂತೆ 18 ಯೋಜನೆಗಳು ಬಹಳ ಪ್ರಾಮುಖ್ಯವಾದಂಥ ಯೋಜನೆಗಳು. ಈ ಯೋಜನೆಗಳು ಎಷ್ಟು ತರಾತುರಿಯಲ್ಲಿ ಪ್ರಾರಂಭವಾಯಿತೋ. ಈಗ ಆ ತರಾತುರಿ ಇಲ್ಲ. ಆ ಉದ್ದೇಶದಿಂದ ನಾನು

ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ. ಇದು ಬಹಳ ನಿಧಾನವಾಗಿ ಮಂದಗತಿಯಲ್ಲಿ ನಡೆಯುತ್ತಿದೆ. ಈಗಾಗಲೇ ಆ ಯೋಜನೆಗಳು ಪ್ರಾರಂಭವಾಗಿ ಆರು ವರ್ಷಗಳಾಗುತ್ತಾ ಬಂದಿದೆ. ಇದರ ಬಗ್ಗೆ ತೀವ್ರವಾದಂಥ ಕೆಲಸವನ್ನು ತೆಗೆದುಕೊಂಡರೆ ಕೆಲಸಗಳು ಈ ಎರಡು ವರ್ಷಗಳಲ್ಲಿ ಮುಗಿಯಬೇಕಾಗಿತ್ತು. ಚಾಮರಾಜ್ ನಗರಕ್ಕೆ ಕುಡಿಯುವ ನೀರನ್ನು ತೆಗೆದುಕೊಂಡು ಹೋಗತಕ್ಕಂಥ ಯೋಜನೆ. ಮೈಸೂರು ನಗರಕ್ಕೆ ಬೇರೆ ಕಡೆಯಿಂದ ತರತಕ್ಕಂಥದ್ದು ಹಾಗೆ ಶಿವಮೊಗ್ಗದ್ದು ಹೀಗೆ ಇಡೀ ರಾಜ್ಯಾದ್ಯಂತ 18 ಬಹಳ ಪ್ರಾಮುಖ್ಯವಾದಂಥ ಯೋಜನೆಗಳು ಇವೆ ಈ ಯೋಜನೆಗಳ ಬಗ್ಗೆ ಸರ್ಕಾರ ಸಂಪೂರ್ಣವಾಗಿ ಗಮನಹರಿಸಲಿಲ್ಲ, ನಾನು ಇವೊತ್ತು ಅತ್ಯಂತ ಪ್ರಾಮಾಣಿಕದಿಂದ ಹೇಳುತ್ತಿದ್ದೇನೆ. ಕುಡಿಯುವ ನೀರಿನ ಸಮಸ್ಯೆ ಈ ಸ್ಥಳಗಳಲ್ಲಿ ಅತ್ಯಂತ ಗಂಭೀರವಾಗಿ ಆಗಿದೆ. ಚಾಮರಾಜ್‌ನಗರದಲ್ಲಿ ಸ್ವಲ್ಪ ಹೆಚ್ಚು ಕಡಿಮೆ 25 ದಿವಸಗಳಿಂದ ನೀರು ಇಲ್ಲ. ನಾನು ಹಾಗೂ ಮಾನ್ಯ ಈಶ್ವರಪ್ಪನವರು ಹಾಗೂ ಇನ್ನು ಅನೇಕ ಸಂಬಂಧಪಟ್ಟವರು ಇದರ ಬಗ್ಗೆ ಕುಡಿಯುವ ನೀರಿನ ಬಗ್ಗೆ ತೀವ್ರವಾಗಿ ಗಮನಹರಿಸಬೇಕೆಂದು ಒತ್ತಾಯ ಮಾಡಿದ್ದಾಯಿತು ಮುಖ್ಯಮಂತ್ರಿಗಳ ಜೊತೆ ಒಂದು ಬೇಡಿಕೆಯನ್ನು ಸಲ್ಲಿಸಿ ಮುಖ್ಯಮಂತ್ರಿಗಳು ಇದರ ಬಗ್ಗೆ ತಮ್ಮ ಕಚೇರಿಯಲ್ಲಿ ಒಂದು ಸಭೆ ಕರೆದಿದ್ದಾಗ ಇದರ ಬಗ್ಗೆ ಅವರಿಗೆ ಒತ್ತಾಯ ಮಾಡಿದ್ದಾಯಿತು.

ಇದಕ್ಕೆ ಸಂಬಂಧಪಟ್ಟಂತೆ ನಗರಾಡಳಿತ ಸಚಿವರ ಜೊತೆಯಲ್ಲೂ ಕೂಡ ಚರ್ಚೆ ಮಾಡಿ ಇದರ ಬಗ್ಗೆ ತೀವ್ರವಾದಂಥ ಕ್ರಮ ಕೈಗೊಳ್ಳಬೇಕೆಂದು ನಿರಂತರವಾಗಿ ಒತ್ತಾಯ ಮಾಡಿದ್ದಾಯಿತು. ಯಾವುದೇ ಒತ್ತಾಯ ಹಾಕಿದರೂ ಇದುವರೆಗೆ ಇದರ ಕಡೆಗೆ ಗಮನಹರಿಸಲಿಲ್ಲ. ಸ್ವಲ್ಪ ಯೋಚನೆ ಮಾಡಿ. ಆರು ವರ್ಷಗಳ ಹಿಂದಿನ ಈ ಯೋಜನೆಗಳು, ಇದನ್ನು ಗುತ್ತಿಗೆಗೆ ಪಡೆದಂಥ ಗುತ್ತಿಗೆದಾರರು ಅವರ ಟೆಂಡರ್ ಪರಿಸ್ಥಿತಿ ಇವೊತ್ತು ಆರು ವರ್ಷವಾದರೂ ಸರ್ಕಾರದ ಅದರ ಕಡೆಗೆ ಗಮನಕೊಡಲಿಲ್ಲವೆಂದರೇನು. ಕೆಲಸವಾಗತಕ್ಕಂಥ ಪರಿಸ್ಥಿತಿ ಏನು? ಈಗ ತಮಗೆ ಹೇಳುವುದಾದರೆ ಚಾಮರಾಜನಗರದಿಂದ ಟಿ. ನರಸೀಪುರಕ್ಕೆ 46 ಕಿ.ಮೀ. ಇದೆ. ಈಗ ಆರು ವರ್ಷಕ್ಕೆ ಆರು ಕಿ.ಮೀ. ಮಾತ್ರ ಕೊಳವೆಯನ್ನು ಹಾಕಿದ್ದೀರಿ. ಈ ಪರಿಸ್ಥಿತಿಯಾದರೆ ಇದು ಬಹಳ ಅತ್ಯಂತ ಗಂಭೀರವಾದಂಥ ಹಾಗೂ ಗಹನವಾದಂಥ ವಿಚಾರ ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಸರ್ಕಾರ ಇದರ ಬಗ್ಗೆ ಏನೇನು ಕ್ರಮ ಕೈಗೊಂಡಿದೆ. ಯಾವಾಗ ಇದನ್ನು ಮುಗಿಸಿಕೊಡುತ್ತಾರೆಂದು ತೀವ್ರವಾಗಿ ಸರ್ಕಾರ ಇದನ್ನು ಹೇಳಬೇಕು. ಮತ್ತು ಚಾಮರಾಜ್‌ನಗರದಲ್ಲಿ ಸುಮಾರು 25 ದಿವಸಗಳಿಂದ ನೀರು ಇಲ್ಲದ ಕಾರಣ ಅಲ್ಲಲ್ಲಿ ತಕ್ಷಣಕ್ಕೆ ಒಂದು ಪರ್ಯಾಯ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕು. ಮತ್ತು ಈ ಕೊಳವೆಯನ್ನು ಹಾಕತಕ್ಕಂಥ ಮನುಷ್ಯ ಸರ್ಕಾರದೊಂದಿಗೆ ಬಹಳ ತೀವ್ರವಾಗಿ ಸಹಕಾರ ಮಾಡುತ್ತಿದ್ದಾನೆ. ಆದರೆ ಒಳಚರಂಡಿ ಮಂಡಳಿಯಲ್ಲಿ ಬರತಕ್ಕಂಥ ಅಧ್ಯಕ್ಷರುಗಳು ಆರಾರು ತಿಂಗಳು ಇರುವುದಿಲ್ಲ. ಅಧಿಕಾರಿಗಳು ಆರು ತಿಂಗಳು ಬರುತ್ತಾರೆ ವ್ಯವಸ್ಥೆ ಮಾಡುತ್ತಾರೆ ಹೊರಟು ಹೋಗುತ್ತಾರೆ. ಈಗ ಬಂದಿರತಕ್ಕಂಥ ಅಧ್ಯಕ್ಷರಿಗಂತೂ ಆ ಕುಡಿಯುವ ನೀರಿನ ಬಗ್ಗೆ ಚಿಂತನೆ ಇಲ್ಲ. ಅದರ ಬಗ್ಗೆ ಗಮನ ಇಲ್ಲ ಈ ಪರಿಸ್ಥಿತಿಯಾಗಿದೆ. ಆದಕಾರಣ ತಾವು ಕೂಡಲೇ ಇದರ ಬಗ್ಗೆ ಗಮನಹರಿಸಿ ಸಮಂಜಸವಾದ ಉತ್ತರವನ್ನು ಕೊಡಿಸಬೇಕೆಂದು ಮನವಿ ಮಾಡುತ್ತಿದ್ದೇನೆ.

ಶ್ರೀ ಕೆ.ಎಸ್. ಈಶ್ವರಪ್ಪ : ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ವಾಟಾಳ್ ನಾಗರಾಜ್‌ರವರು ಹಿರಿಯ ಸದಸ್ಯರು ಹೇಳಿದ ಪ್ರಕಾರ 1990ನೇ ಇಸವಿಯಲ್ಲಿ ಪ್ರಾರಂಭವಾಗಿ ಇವೊತ್ತು 1996 ಆಗಿ ಆರು ವರ್ಷವಾದರೂ ಕೂಡ ಮುಗಿದಿಲ್ಲ,

ಈ ಹಿಂದೆ 5 ಕೋಟಿ ರೂ.ಗಳ ಯೋಜನೆ ಏನು ಇತ್ತು ಆ ಯೋಜನೆ ಇವ್ಹೊತ್ತು 12 ಕೋಟಿ. ರೂ.ಗಳಿಗೆ ಬಂದಿದೆಯಲ್ಲದೇ ಈ 12 ಕೋಟಿ ರೂ.ಗಳಿಗೂ ಮುಗಿಯುವ ಸ್ಥಿತಿ ಇಂದು ಇಲ್ಲ. ನಮ್ಮ ಉಪ ಮುಖ್ಯ ಮಂತ್ರಿಗಳು ಮೊನ್ನೆ ಒಂದು ಅಧಿಕಾರಿಗಳ ಸಭೆಯನ್ನು ಕರೆದಿದ್ದರು, ಅದಕ್ಕೆ ಶಾಸಕರೆಲ್ಲರೂ ಹೋಗಿದ್ದೆವು. ಆ ಸಭೆಯಲ್ಲಿ ಅಧಿಕಾರಿಗಳು ಮಾತನಾಡುತ್ತಾ ಈಗಿನ ಗುತ್ತಿಗೆದಾರರು ಹಿಂದಿನ ದರಕ್ಕೆ ಟೆಂಡರ್ ಒಪ್ಪಿಕೊಳ್ಳದೇ ಇರುವುದರಿಂದ ಇವ್ಹೊತ್ತು ಈ ಸ್ಥಿತಿ ಬಂದಿದೆ ಎಂದು ಹೇಳಿದರು. 1990ನೇ ಇಸವಿಯಲ್ಲಿ ಒಂದು ಬ್ಯಾಗ್ ಸಿಮೆಂಟ್ 80 ರೂ. ಇದ್ದದ್ದು ಇವ್ಹೊತ್ತಿನ ದಿವಸ 150 ರೂ.ಗಳಾಗಿದೆ. ಹೀಗಿರುವಾಗ ಗುತ್ತಿಗೆದಾರರು ಹೇಗೆ ಒಪ್ಪಿಕೊಳ್ಳುತ್ತಾರೋ, ಇಲ್ಲವೋ ಅದು ಗೊತ್ತಿಲ್ಲ. ಆ ಗುತ್ತಿಗೆದಾರರೇ ಮುಗಿಸುತ್ತಾರೋ ಅಥವಾ ಇಲ್ಲವೋ ಅದು ನನಗೆ ಗೊತ್ತಿಲ್ಲ. ನಾನು ಹೇಳುವುದು ಇಷ್ಟೇ, ಗುತ್ತಿಗೆದಾರರಿಗೆ ಹಳೆಯ ದರವನ್ನೇ ಕೊಡುತ್ತೀರೋ ಅಥವಾ ಬೇರೆ ದರವನ್ನೇ ನಿಗದಿ ಮಾಡುತ್ತೀರೋ ಅದು ನನಗೆ ಬೇಕಾಗಿಲ್ಲ ಎಂದು ಈ ಯೋಜನೆಗಳನ್ನು ಮುಕ್ತಾಯ ಮಾಡುತ್ತೀರಿ? ಏಕೆಂದರೆ ಕರ್ನಾಟಕ ರಾಜ್ಯದಲ್ಲಿ ಇವ್ಹೊತ್ತು ಎಲ್ಲಾ ಯೋಜನೆಗಳ ಅರ್ಧ ಕೆಲಸವೂ ಕೂಡ ಆಗದೇ ಉಳಿದಿವೆ. ಇದಕ್ಕೋಸ್ಕರ ಸರ್ಕಾರ ತುರ್ತು ಗಮನವನ್ನು ಕೊಟ್ಟು ಎಷ್ಟು ಹಣ ಬೇಕೋ ಅಷ್ಟನ್ನೂ ಬಿಡುಗಡೆ ಮಾಡಿ ಸಂಬಂಧಪಟ್ಟ ಅಧಿಕಾರಿಗಳಿಗೆ ಸಂಪೂರ್ಣವಾಗಿ ಅಧಿಕಾರವನ್ನು ಕೊಟ್ಟು ಈ ಯೋಜನೆಗಳನ್ನು ಪೂರ್ಣಗೊಳಿಸುವುದಕ್ಕೆ ಗಮನ ಕೊಡಬೇಕು. ಏಕೆಂದರೆ ಕುಡಿಯುವ ನೀರು ಇಲ್ಲ ಎಂದರೆ ರಾಜ್ಯದಲ್ಲಿ ಒಂದು ದೊಡ್ಡ ಸಮಸ್ಯೆಯಾಗುತ್ತದೆ. ಆದ್ದರಿಂದ ಸರ್ಕಾರ 18 ಈ ಯೋಜನೆಗಳ ಹಿಂದಿನ ಅಂದಾಜು ಏನಿದೆ ಮತ್ತು ಈಗ ಅದೇ ಯೋಜನೆಗಳಿಗೆ ಎಷ್ಟು ಅಂದಾಜು ಪಟ್ಟಿ ಇದೆ ಈ ಯೋಜನೆಗಳನ್ನು ಪೂರ್ಣಗೊಳಿಸುವುದಕ್ಕೆ ಏನೇನು ಕ್ರಮಗಳನ್ನು ಕೈಗೊಂಡಿದ್ದೀರಿ. ನಗರ ನೀರು ಸರಬರಾಜು ಮಂಡಳಿಯವರು ಇವುಗಳನ್ನು ಮಾಡಲು ತಯಾರಾಗಿದ್ದಾರೆಯೇ? ಇದೆಲ್ಲಾ ಪ್ರಕ್ರಿಯೆಗಳನ್ನು ಮಾಡಿಕೊಂಡು ಸಂಬಂಧಪಟ್ಟ ಗುತ್ತಿಗೆದಾರರನ್ನು ಕರೆಸಿ ತಕ್ಷಣ ಈಗ ಏನು ಯೋಜನೆಗಳ ಕೆಲಸಗಳು ನಿಂತಿವೆ ಅವುಗಳನ್ನು ಶೀಘ್ರ ಗತಿಯಲ್ಲಿ ಮುಕ್ತಾಯ ಮಾಡಬೇಕು. ಈ ದಿಕ್ಕಿನಲ್ಲಿ ಸರ್ಕಾರ ಸಂಪೂರ್ಣ ಗಮನಕೊಟ್ಟು ಅನುಕೂಲ ಮಾಡಿ ಕೊಡಬೇಕೆಂದು ಸರ್ಕಾರದವರಲ್ಲಿ ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಸನ್ಮಾನ್ಯ ಅಧ್ಯಕ್ಷರೇ, ಚಿಕ್ಕಮಗಳೂರು ಪಟ್ಟಣಕ್ಕೆ ಕುಡಿಯುವ ನೀರನ್ನು ಒದಗಿಸುವುದಕ್ಕೆ ಹಿಂದಿನ ಸರ್ಕಾರ 43 ಕುಡಿಯುವ ನೀರಿನ ಯೋಜನೆಗಳಿಗೆ ಅನುಮತಿಯನ್ನು ಕೊಟ್ಟಿರುವುದರ ಬಗ್ಗೆ ಸರ್ಕಾರ ಆದೇಶವನ್ನೂ ಸಹಿತ ಹೊರಡಿಸಿರುತ್ತದೆ. ಆದೇಶದ ಸಂಖ್ಯೆ ಹೆಚ್‌ಯುಡಿ:ಯುಡಬ್ಲ್ಯೂಎಸ್ ೯೪ ದಿನಾಂಕ 11-08-94. ಚಿಕ್ಕಮಗಳೂರು ಮಲೆನಾಡು ಪ್ರದೇಶವಾಗಿದ್ದರೂ ಸಹ ಇಲ್ಲಿ ಕುಡಿಯುವ ನೀರಿನ ಸಮಸ್ಯೆ ಬಹಳಷ್ಟಿದೆ.

ಇಲ್ಲಿಯವರೆವಿಗೂ ಕೂಡ ಸರ್ಕಾರದಿಂದ ಇಲ್ಲಿ ಕುಡಿಯುವ ನೀರಿಗಾಗಿ ಸವಲತ್ತನ್ನು ದೊರಕಿಸಿಕೊಡಲಿಕ್ಕೆ ಪ್ರಯತ್ನ ಮಾಡಿಲ್ಲ, ಇವ್ಹೊತ್ತು ದಿನನಿತ್ಯ ಜನಸಂಖ್ಯೆ ಬೆಳೆಯುತ್ತಿರುವುದರ ಜೊತೆಗೆ ಈಗ ಕರ್ನಾಟಕ ಗೃಹ ಮಂಡಳಿಯವರೂ ಸಹಿತ ಒಂದು ಯೋಜನೆಯಡಿಯಲ್ಲಿ 1000 ಮನೆಗಳನ್ನು ನಿರ್ಮಿಸಿದ್ದಾರೆ. ಈ ಮನೆಗಳಲ್ಲಿ ವಾಸಿಸಿರುವ ಜನರಿಗೆ ಕುಡಿಯುವ ನೀರಿನ ಅಭಾವವಿದೆ. ಇವ್ಹೊತ್ತು ವಿದ್ಯುಚ್ಛಕ್ತಿಯ ಮುಖಾಂತರ ನೀರನ್ನು ಒದಗಿಸಿಕೊಡುವಂಥ ಕಾರ್ಯಕ್ರಮದಲ್ಲಿಯೇ ಇವತ್ತು ಸಾಕಷ್ಟು ತೊಂದರೆಗಳನ್ನು ಅನುಭವಿಸುತ್ತಿದ್ದಾರೆ. ಹಿಂದಿನ ಕಾಲದಲ್ಲಿ ಅಂದರೆ 1963-64ನೇ ಇಸವಿಯಲ್ಲಿ ಒಂದು ಗ್ರಾವಿಟಿ ವಾಟರ್ ಸಪ್ಲೈಯನ್ನು ಪ್ರಾರಂಭ ಮಾಡಿರತಕ್ಕಂಥದ್ದು ಕೇವಲ 38 ಸಾವಿರ ಜನಸಂಖ್ಯೆಗೆ ಮಾತ್ರ ಸೀಮಿತವಾಗಿರುವಂಥದ್ದು. ಆದರೆ ಇವ್ಹೊತ್ತು ಪಟ್ಟಣದ ಜನಸಂಖ್ಯೆ ಒಂದು ಲಕ್ಷಕ್ಕೂ

ಹೆಚ್ಚಿರುವಂಥ ಸಂದರ್ಭದಲ್ಲಿ ಒಬ್ಬ ವ್ಯಕ್ತಿಗೆ ಕನಿಷ್ಠ 30 ಗ್ಯಾಲನ್ನು ನೀರನ್ನು ಒದಗಿಸಬೇಕು ಎನ್ನುವ ಯೋಜನೆ ಸರ್ಕಾರದಲ್ಲಿದ್ದರೂ ಸಹಿತ ಕೇವಲ 8 ಅಥವಾ 9 ಗ್ಯಾಲನ್ ನೀರನ್ನೂ ಆದರೂ ಒದಗಿಸಿಕೊಡುವಲ್ಲಿ ತೊಂದರೆಯನ್ನು ನಾವು ಎದುರಿಸಬೇಕಾಗಿದೆ. ಹಿಂದಿನ ಸರ್ಕಾರ 'ಯಗಚಿ' ಜಲಾಶಯದಿಂದ 21ಕಿ.ಮೀ. ದೂರದವರೆಗೆ ಕೊಳವೆಯನ್ನು ಅಳವಡಿಸಿ ಚಿಕ್ಕಮಗಳೂರು ಪಟ್ಟಣಕ್ಕೆ 4.5 ಎಮ್‌ಜಿಡಿ ನೀರನ್ನು ಒದಗಿಸಿಕೊಡುವ ಒಂದು ಯೋಜನೆಗೆ 13.75 ಲಕ್ಷ ರೂ.ಗಳ ಯೋಜನೆಗೆ ಹಿಂದಿನ ಸರ್ಕಾರ ಅನುಮತಿಯನ್ನು ನೀಡಿತ್ತು. ಇವೊತ್ತಿನವರೆಗೆ ಸರ್ಕಾರದ ವತಿಯಿಂದ ಯಾವುದೇ ರೀತಿಯಲ್ಲೂ ಕೂಡ ಈ ಕಾಮಗಾರಿಯನ್ನು ಪ್ರಾರಂಭ ಮಾಡುವುದರ ಬಗ್ಗೆ ಇಲ್ಲಿಯವರೆವಿಗೂ ಯಾವುದೇ ಗಮನವನ್ನು ಕೊಟ್ಟಿಲ್ಲ. ಈ ಒಂದು ಯೋಜನೆಯನ್ನು ಬೇಲೂರು ಮತ್ತು ಚಿಕ್ಕಮಗಳೂರಿಗೆ ಹಾಕಿರುವುದರಿಂದ ಮತ್ತು ಬಹಳ ಅಗತ್ಯವಾಗಿ ಚಿಕ್ಕಮಗಳೂರು ಪಟ್ಟಣಕ್ಕೆ ಕುಡಿಯುವ ನೀರಿನ ಅವಶ್ಯಕತೆ ಇರುವುದರಿಂದ ತಮ್ಮ ಮುಖಾಂತರ ಸರ್ಕಾರಕ್ಕೆ ಒತ್ತಾಯ ತರುವುದೇನೆಂದರೆ, ಈ ಕಾಮಗಾರಿಯನ್ನು ಅತಿ ಶೀಘ್ರದಲ್ಲಿ ಪ್ರಾರಂಭ ಮಾಡಬೇಕು ಮತ್ತು ಈ ನಿಟ್ಟಿನಲ್ಲಿ ಚಿಕ್ಕಮಗಳೂರು ಪಟ್ಟಣದ ನಾಗರೀಕರಿಗೆ ಏನು ಕುಡಿಯುವ ನೀರಿನ ತೊಂದರೆ ಉಂಟಾಗಿದೆ ಅದನ್ನು ಬಗೆಹರಿಸುವುದಕ್ಕಾಗಿ ಸೂಕ್ತ ಕ್ರಮವನ್ನು ಜರುಗಿಸುವ್ದರ ಜೊತೆಗೆ ಈ ಕೆಲಸವನ್ನು ಯಾವಾಗ ಪ್ರಾರಂಭ ಮಾಡುತ್ತಾರೆ ಎನ್ನುವುದರ ಬಗ್ಗೆ ಸಂಪೂರ್ಣವಾದಂತಹ ಮಾಹಿತಿಯನ್ನು ಒದಗಿಸಿಕೊಡಬೇಕು ಎಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

ಶ್ರೀ ಎ. ರಾಮದಾಸ್ : ಮಾನ್ಯ ಅಧ್ಯಕ್ಷರೇ,

ಅಧ್ಯಕ್ಷರು : ನೀವು ಮೊದಲೇ ಬಂದು ನನಗೆ ಸೂಚನೆಯನ್ನು ಕೊಟ್ಟರೆ ನಾನು ಅವರಿಗೆ ಇಂಫಿಂಥವರು ಮಾತನಾಡುತ್ತಾರೆ ಎಂಬ ಬಗ್ಗೆ ಸೂಚನೆಯನ್ನು ಕೊಡುತ್ತೇನೆ. ನೀವು ಸೂಚನೆಯನ್ನು ಕೊಡದೇ ತಕ್ಷಣ ಎದ್ದುನಿಂತು ಮೈಸೂರು ಎಂದರೆ ಅವರೇನು ಕಂಪ್ಯೂಟರ್ ಏನು? ಆಯಿತು ಮಾತನಾಡಿ.

ಶ್ರೀ ಎ. ರಾಮದಾಸ್ : ಸನ್ಯಾಸ್ಯ ಅಧ್ಯಕ್ಷರೇ, ಮೈಸೂರಿನ ಕುಡಿಯುವ ನೀರಿನ ಬಗ್ಗೆ ಸದನದಲ್ಲಿ ಉತ್ತರ ಬಂದಾಗ ಬಹಳ ಸಂತೋಷದಿಂದ ಹೋಗಿದ್ದೆವು. ಕಳೆದ 6 ತಿಂಗಳುಗಳಿಂದ ಮೂರನೇ ಯೋಜನೆ ಅರ್ಧಕ್ಕೆ ನಿಂತುಹೋಗಿದೆ, ನಾಲ್ಕನೇ ಯೋಜನೆಗೆ ಅಡಿಗಲ್ಲನ್ನು ಹಾಕಿದೆ, ಆದರೆ ಅದು ಇನ್ನೂ ಅಡಿಗಲ್ಲಾಗೇ ಉಳಿದಿದೆಯಾದ್ದರಿಂದ ಅಲ್ಲಿ ಕೆಲಸ ಆಗಿಲ್ಲ ಎನ್ನುವುದರ ಬಗ್ಗೆ ಹೇಳಿದ್ದೆವು. ಇನ್ನೊಂದು ಆಶ್ಚರ್ಯಕರವಾದ ಸಂಗತಿ ಏನೆಂದರೆ, ಮೈಸೂರು ಮತ್ತು ಬಲಮುರಿ ಮಧ್ಯೆ ಇರುವಂಥ 8 ಎಂಜಿಡಿ ನೀರಿನ ವ್ಯವಸ್ಥೆಗೆ ಹಣ ಬಂದಿದೆ. ಪೈಪುಗಳು ಬಂದಿದೆ, ಅವೆಲ್ಲವೂ ಅಲ್ಲಿದೆ. ಆದರೆ 6 ತಿಂಗಳುಗಳಿಂದ ಕೆಲಸ ಆಗದೇ ಏತಕ್ಕೆ ನಿಂತಿದೆ ಎಂದರೆ ಕೇವಲ ನೀರಾವರಿ ಇಲಾಖೆಯಿಂದ ಒಂದು ಅಬ್ಜೆಕ್ಷನ್ ಹಾಕಿದ್ದರು, ಅದನ್ನು ಇವರು ಕ್ಲಿಯರ್ ಮಾಡಿಕೊಳ್ಳಲಿಲ್ಲ ಎನ್ನುವ ಒಂದೇ ಒಂದು ಕಾರಣಕ್ಕಾಗಿ ಮೈಸೂರು ಮತ್ತು ಬಲಮುರಿ ಮಧ್ಯೆ ಇರುವಂಥ 8ಎಂಜಿಡಿ ಸ್ಕೀಮ್ ನಿಂತುಹೋಗಿದೆ. ಇಲಾಖೆಗಳಲ್ಲಿ ಒಂದೊಂದು ಪೇಪರ್ ಮೂವ್ ಆಗಲಿಕ್ಕೆ ಸಮಸ್ಯೆಯಾಗಿ ಸುಮಾರು 6 ವರ್ಷಗಳಿಂದ ಮೈಸೂರಿನ ಈ ನೀರಿನ ಸಮಸ್ಯೆ ಈ ರೀತಿಯಾಗಿ ನಿಂತಿರುವಾಗ ಇದರ ಬಗ್ಗೆ ಸನ್ಯಾಸ್ಯ ಸಚಿವರು ಲಿಖಿತ ಮೂಲಕ ಸದನದಲ್ಲಿ ಉತ್ತರವನ್ನು ಕೊಟ್ಟಿದ್ದಾರೆಯಾದರೂ ಕೂಡ ಅದಕ್ಕೂ ಬೆಲೆ ಕೊಡದೇ ಯಾವುದೇ ಕಾರ್ಯಗಳನ್ನೂ ಕೂಡ ಮಾಡಿಲ್ಲ, ಮೈಸೂರಿನ ಜನಕ್ಕೆ ಸಚಿವರು ಈ ನೀರಿನ ಸೌಲಭ್ಯದ ಬಗ್ಗೆ ಯಾವ ರೀತಿಯಾದ ಆಶ್ವಾಸನೆಯನ್ನು ಕೊಟ್ಟಿದ್ದಾರೋ, ಅದರ ಬಗ್ಗೆ ಜನ ಯಾವ ರೀತಿಯಾಗಿ ಆಸೆಯನ್ನು ಇಟ್ಟುಕೊಂಡಿದ್ದರೋ ಅದೆಲ್ಲಾ ಇವೊತ್ತು ನುಚ್ಚುನೂರಾಗುವ

ಪರಿಸ್ಥಿತಿ ಇದೆ. ಇದರ ಬಗ್ಗೆ ಸರ್ಕಾರ ಏನು ಕ್ರಮಗಳನ್ನು ಕೈಗೊಂಡಿದೆ ಎನ್ನುವುದರ ಬಗ್ಗೆ ತಮ್ಮ ಮೂಲಕ ಕೇಳಬಯಸುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ (ಗೃಹ ಸಚಿವರು) : ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರುಗಳಾದ ಮಾನ್ಯ ವಾಟಾಳ್ ನಾಗರಾಜ್‌ರವರು, ಮಾನ್ಯ ಈಶ್ವರಪ್ಪನವರು, ಮಾನ್ಯ ಸಗೀರ್ ಅಹಮ್ಮದ್‌ರವರು ಮತ್ತು ರಾಮದಾಸ್‌ರವರು ಎತ್ತಿರತಕ್ಕಂಥ ವಿಚಾರದಲ್ಲಿ ಸತ್ಯಾಂಶವಿದೆ. ಕುಡಿಯುವ ನೀರಿಗೆ ಬಹುತೇಕ ಪಟ್ಟಣಗಳಲ್ಲಿ ತೊಂದರೆ ಇರತಕ್ಕಂಥದ್ದು ನಿಜ. ಈ ಒಂದು ಪಟ್ಟಣ ಪ್ರದೇಶಗಳಲ್ಲಿ ನಾವೇನು ಯಾವ ಸಂದರ್ಭದಲ್ಲಿ ಇದನ್ನು ಮುಗಿಸಬೇಕೆಂದು ನಿರೀಕ್ಷೆ ಇಟ್ಟುಕೊಂಡು ಕೆಲಸವನ್ನು ಸರ್ಕಾರಗಳು ಮಾಡಿದೆಯೋ ಆ ನಿರೀಕ್ಷೆಯಲ್ಲಿ ಕೆಲಸಗಳು ಆಗದೇ ಇರತಕ್ಕಂಥದ್ದು ನಿಜ. ಮತ್ತು ಅಲ್ಲಿರತಕ್ಕಂಥ ಗುತ್ತಿಗೆದಾರರು ಹಿಂದೆ ಇದ್ದಂಥ ಟೆಂಡರ್ ದರದಲ್ಲಿಯೇ ಕೆಲಸ ಮಾಡಲಿಕ್ಕೆ ಅವರಿಗೂ ಕೂಡ ಬಹಳ ಕಷ್ಟವಾಗುತ್ತದೆ. ಈ ವಿಚಾರದ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಿಗೆ ಮತ್ತು ನಮ್ಮ ಸರ್ಕಾರಕ್ಕೆ ಇದನ್ನು ಬಗೆಹರಿಸಬೇಕು ಎನ್ನುವ ಕಾಳಜಿ ಇದೆ. ಬಹುಶಃ ಈ ಹಿಂದಿನ 8Ë10 ದಿವಸಗಳಲ್ಲಿ ಮಳೆ ಆಗದೇ ಇದ್ದಿದ್ದರೆ ಪರಿಸ್ಥಿತಿ ಇನ್ನೂ ಹೆಚ್ಚಿನ ತೊಂದರೆಯಾಗುತ್ತಿತ್ತು. ತಮಗೆ ಗೊತ್ತಿರುವ ಹಾಗೆ ಮಾನ್ಯ ಮುಖ್ಯಮಂತ್ರಿಗಳು ಸಚಿವ ಸಂಪುಟದಲ್ಲಿ ಒಂದು ತೀರ್ಮಾನವನ್ನು ತೆಗೆದುಕೊಂಡು ರಾಜ್ಯದಲ್ಲಿ ಕುಡಿಯುವ ನೀರಿಗೆ ತೊಂದರೆಯಾಗಬಾರದು ಎಂದು ಹೇಳಿ ಎಲ್ಲಾ ಜಿಲ್ಲೆಗಳ ಪಟ್ಟಣ ಪ್ರದೇಶಗಳು ಹಾಗೂ ಗ್ರಾಮೀಣ ಪ್ರದೇಶಗಳಿಗೆ ಸಾಕಷ್ಟು ಹಣವನ್ನು ಬಿಡುಗಡೆ ಮಾಡಿರತಕ್ಕಂಥದ್ದು ತಮಗೆ ಗೊತ್ತಿರತಕ್ಕಂಥ ವಿಚಾರವೇ ಆಗಿದೆ. ಈ ಸಂದರ್ಭದಲ್ಲಿ ನಾನಾದರೂ ಏನು ಹೇಳುತ್ತೇನೆಂದರೆ, ಚಾಮರಾಜನಗರದಲ್ಲಿ ವಿಶೇಷವಾಗಿ ಏನಿದೆ ಇದರ ಬಗ್ಗೆ ಮಾನ್ಯ ವಾಟಾಳ್ ನಾಗರಾಜ್‌ರವರು ಮತ್ತು ಮಾನ್ಯ ಈಶ್ವರಪ್ಪನವರು ಇವರುಗಳೆಲ್ಲಾ ಒತ್ತಾಯ ಮಾಡಿದ ಮೇಲೆ ಮಾನ್ಯ ಮುಖ್ಯಮಂತ್ರಿಗಳೇ ಸ್ವತಃ ಸಂಬಂಧಪಟ್ಟ ಅಧಿಕಾರಿಗಳನ್ನು ಕರೆಸಿ ಸಭೆಯನ್ನು ಮಾಡಿದ್ದಾರೆ. ಕೊಳವೆ ಮೂಲಕ ನೀರು ಹೋಗತಕ್ಕಂಥ ವಿಚಾರ ಏನಿದೆ, ಮತ್ತು ಗುತ್ತಿಗೆದಾರರಿಗೆ ಏನು ಹಣ ಬಾಕಿ ಕೊಡಬೇಕಾಗಿದೆ ಇದರ ಬಗ್ಗೆ ಸಂಪೂರ್ಣವಾಗಿ ಪರಿಶೀಲನೆಯನ್ನು ಮಾಡಿದ್ದಾರೆ.

ಶಿವಮೊಗ್ಗಾ ಜಿಲ್ಲೆಯ ಬಗ್ಗೆ ಮಾನ್ಯ ಉಪ ಮುಖ್ಯ ಮಂತ್ರಿಗಳು ಸ್ವತಃ ಸಭೆಯನ್ನು ಕರೆದು ಇದರ ಬಗ್ಗೆ ಪರಿಶೀಲನೆಯನ್ನು ಮಾಡಿದ್ದಾರೆ. ಚಿಕ್ಕಮಗಳೂರು ಜಿಲ್ಲೆಯ ಬಗ್ಗೆಯೂ ನಾನು ಇವ್ವೊತ್ತು ಭರವಸೆಯನ್ನು ಕೊಡುತ್ತಿದ್ದೇನೆ. ಪಟ್ಟಣ ಪ್ರದೇಶಗಳಲ್ಲಿ ಕರ್ನಾಟಕ ನೀರು ಸರಬರಾಜು ಮಂಡಳಿ ಏನಿದೆ ಇದಕ್ಕೆ ನಾವು ಹಣವನ್ನು ಬಿಡುಗಡೆ ಮಾಡುವುದರ ಜೊತೆಗೆ ಈ ಹಿಂದೆ ಇದ್ದಂಥ ಅನೇಕ ಗುತ್ತಿಗೆದಾರರಿಗೂ ಮತ್ತು ಮಂಡಳಿಯವರಿಗೂ ಏನು ತಿಕ್ಕಾಟಗಳು ಇವೆ ಅದನ್ನು ಬಗೆಹರಿಸಿ ಆದಷ್ಟು ಈ ಎಲ್ಲಾ ಯೋಜನೆಗಳನ್ನು ನಾವು ಪೂರೈಸಲೇಬೇಕಾಗುತ್ತದೆ. ಇಲ್ಲದೇ ಹೋದರೆ ತೊಂದರೆಯಾಗುತ್ತದೆ ಎಂಬ ವಿಚಾರ ಸರ್ಕಾರದ ಗಮನದಲ್ಲಿದೆ. ಇದಕ್ಕೆ ಬಹಳ ಮುಖ್ಯವಾಗಿ ಬೇಕಾಗಿರತಕ್ಕಂಥದ್ದು ಹಣದ ಬಿಡುಗಡೆ. ಹಣ ಕೊಡದೇ ಹೋದರೆ ಇದು ಆಗುವುದಿಲ್ಲ. ಸುಮ್ಮನೇ ಯೋಜನೆಗಳನ್ನು ಪ್ರಾರಂಭ ಮಾಡಿ ಅವುಗಳನ್ನು ಸುಮ್ಮನೇ ಅಷ್ಟಕ್ಕೇ ನಿಲ್ಲಿಸಿಕೊಂಡು ಬಿಟ್ಟರೆ ಎಸ್ಕಲೇಶನ್ ಆಫ್ ಕಾಸ್ಟ್ ಜಾಸ್ತಿಯಾಗುತ್ತಾ ಹೋಗುತ್ತದೆ. ಇದರಿಂದಾಗಿ ಈಗಾಗಲೇ ಇದಕ್ಕೆ ಹಣಕಾಸಿನ ಮಂತ್ರಿಗಳು ಒಪ್ಪಿಗೆಯನ್ನು ಕೊಟ್ಟಿದ್ದಾರೆ ಮತ್ತು ಮಾನ್ಯ ಮುಖ್ಯಮಂತ್ರಿಗಳು ಬಹಳ ಕಾಳಜಿಯನ್ನು ಇಟ್ಟುಕೊಂಡು ಸ್ವತಃ ಎಲ್ಲಾ ಪಟ್ಟಣ ಪ್ರದೇಶಗಳಲ್ಲಿ ಸ್ಪೆಷಲ್ ರಿವ್ಯೂ ಮೀಟಿಂಗ್‌ಗಳನ್ನು ಮಾಡಿದ್ದಾರೆ. ಅಧಿವೇಶನದ ನಂತರವೂ ಇದನ್ನು ಮಾಡುತ್ತೇವೆ. ಕುಡಿಯುವ ನೀರಿಗೆ ತೊಂದರೆಯಾಗದಂತೆ

ಶಾಶ್ವತವಾಗಿರತಕ್ಕಂಥ ಪರಿಹಾರಗಳು ಏನಿವೆ ಆ ಕೆಲಸಗಳನ್ನು ತ್ವರಿತಗತಿಯಲ್ಲಿ ಮುಗಿಸಲಿಕ್ಕೆ ಮತ್ತು ಪ್ರಾರಂಭವಾಗದೇ ಇರತಕ್ಕಂಥ ಕೆಲಸಗಳನ್ನು ಪ್ರಾರಂಭ ಮಾಡುವುದಕ್ಕೋಸ್ಕರ ಭರವಸೆಯನ್ನು ತಮ್ಮ ಮೂಲಕ ಮಾನ್ಯ ಸದಸ್ಯರುಗಳಿಗೆ ನಾನು ಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷರೇ, ಅವರ ಭರವಸೆಯ ಬಗ್ಗೆ ನನಗೆ ಅಪನಂಬಿಕೆ ಇಲ್ಲ, ಆದರೆ ಇಂಥ ಭರವಸೆಯನ್ನು ಸುಮಾರು 6 ವರ್ಷಗಳಿಂದ ಪಡೆದು ಪಡೆದು ನನಗೆ ಬಹಳ ನೋವಾಗಿದೆ. ಈ ನೋವಿನ ಪರಿಸ್ಥಿತಿ ಮಾನ್ಯ ಸಿದ್ದರಾಮಯ್ಯನವರಿಗೂ ಅರ್ಥವಾಗಿದೆ. ಏಕೆಂದರೆ ಈ ವಿಚಾರದ ನೋವು ಅವರಿಗೂ ಬರುತ್ತದೆ ಆದ್ದರಿಂದ ನಮ್ಮ ಪರಿಸ್ಥಿತಿ ಬಗ್ಗೆ ತಮಗೂ ಅರ್ಥವಾಗುತ್ತದೆ. ನಾವು ನಮ್ಮ ಕ್ಷೇತ್ರದಲ್ಲಿ ಜನಗಳು ಈ ಬಗ್ಗೆ ಮಾತನಾಡಿಕೊಳ್ಳುವುದನ್ನು ಕೇಳತಕ್ಕಂಥ ಪರಿಸ್ಥಿತಿಯಲ್ಲಿ ನನಗನ್ನಿಸುತ್ತದೆ, ಬೇರೆ ವಿಧಿಯಿಲ್ಲದೇ ನಾನು ಧರಣಿಯನ್ನು ಮಾಡಬೇಕಾಗಿದೆ, ದಯಮಾಡಿ ತಾವು ಬೇಜಾರು ಮಾಡಿಕೊಳ್ಳಬಾರದು.

ವಾಟಾಳ್ ನಾಗರಾಜ್‌ರವರು ಈ ಪರಿಸ್ಥಿತಿಗೆ ಏತಕ್ಕೆ ಬಂದರು ಎಂದು ತಾವು ಬೇಸರ ಮಾಡಿಕೊಳ್ಳಬೇಡಿ. ಮಾನ್ಯ ಸಿಂಧ್ಯರವರು ಕೊಟ್ಟಂಥ ಉತ್ತರದ ಬಗ್ಗೆ ನನಗೆ ನಂಬಿಕೆ ಇಲ್ಲವೆಂದು ಅಲ್ಲ, ನಮ್ಮ ಮಾನ್ಯ ಹಣಕಾಸಿನ ಸಚಿವರಿಗೆ ಈ ಮಾತಿನ ಬಗ್ಗೆ ಗಮನ ಇಲ್ಲವೆಂದು ಅಲ್ಲ, ಕಳೆದ 6 ವರ್ಷಗಳಿಂದ ಇದೇ ಪರಿಸ್ಥಿತಿ ಆಗಿದೆ ಎಂದರೆ ನಾನೇನು ಮಾಡಬೇಕೋ ತಾವೇ ಹೇಳಿ ವಿಧಿ ಇಲ್ಲದೆ ನಾನು ತಮ್ಮ ಪೀಠದ ಮುಂದಿನ ಆವರಣದಲ್ಲಿ ಬಂದು ಧರಣಿ ಕುಳಿತುಕೊಳ್ಳಬೇಕಾಗಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೆ, ಇವರು 6 ವರ್ಷಗಳ ಕಾಲ ಬೇರೆಯವರಿಗೆ ಅವಕಾಶ ಮಾಡಿಕೊಟ್ಟಿದ್ದಾರೆ. ಈಗ 6 ತಿಂಗಳ ಕಾಲ ಅವಕಾಶ ಕೊಡುವುದಕ್ಕೆ ತಯಾರಿಲ್ಲ, ಅಂದರೆ ಇವರು ಎಷ್ಟೊಂದು ನಿರ್ದಯಿಗಳಾಗಿದ್ದಾರೆಂಬುದನ್ನು ತಾವೇ ನೋಡಿ.

ಶ್ರೀ ವಾಟಾಳ್ ನಾಗರಾಜ್ : ನಾನು ಧರಣಿ ಕೂಡದೆ ಬೇರೆ ಮಾರ್ಗವೇ ಇಲ್ಲ, ಇದ್ದರೆ ತಾವು ಬೇರೆ ಮಾರ್ಗೋಪಾಯವನ್ನು ಹುಡುಕಿ.

(ಗೊಂದಲ)

(ಶ್ರೀ ವಾಟಾಳ್ ನಾಗರಾಜ್‌ರವರು ಮಾನ್ಯ ಅಧ್ಯಕ್ಷರ ಪೀಠದ ಮುಂದಿನ ಆವರಣದಲ್ಲಿ ಧರಣಿ ಕುಳಿತರು)

ಅಧ್ಯಕ್ಷರು : ಪ್ರಾರಂಭಕ್ಕೆ ತಾವು ಚಾಮರಾಜನಗರದ ಶಾಸಕರು. ದಿನ ಕಳೆದಂತೆ ತಾವು ಹಿರಿಯ ಸದಸ್ಯರಾಗುತ್ತಿದ್ದೀರಿ. ಅಂದ ಮೇಲೆ ರಾಜ್ಯದ ಪ್ರಮುಖ ನಾಯಕರುಗಳಲ್ಲಿ ಒಬ್ಬರು. ನೀವು ಚಾಮರಾಜ ನಗರದ ಕುಡಿಯುವ ನೀರಿಗೋಸ್ಕರ ಧರಣಿ ಮಾಡುವುದಾದರೆ ರಾಜ್ಯದ ಜನತೆ ಎಷ್ಟು ಬೇಸರ ಪಟ್ಟುಕೊಳ್ಳುತ್ತಾರೆ ತಾವೇ ಯೋಚನೆ ಮಾಡಿ.

(ಗೊಂದಲ)

ಅಧ್ಯಕ್ಷರು : ತಮ್ಮಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ತಾವು ರಾಜ್ಯದ ಜನರಿಗೆ ನಿರಾಸೆ ಮಾಡಬಾರದು. ರಾಜ್ಯದ ಎಲ್ಲಾ ವಿಚಾರಗಳ ಬಗ್ಗೆ ತಾವು ಭಾಗವಹಿಸಬೇಕಾಗಿರುವುದರಿಂದ ದಯಮಾಡಿ ನನ್ನ ಮನವಿಗೆ ಬೆಲೆ ಕೊಟ್ಟು ತಾವು ತಮ್ಮ ಸ್ಥಾನಕ್ಕೆ ಹೋಗಬೇಕಾಗಿ ವಿನಂತಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಚಾಮರಾಜ ನಗರವೂ ಸೇರಿದಂತೆ ಒಟ್ಟು 18 ಯೋಜನೆಗಳ ವಿಚಾರ ಇದರಲ್ಲಿ ಇದೆ.

ಅಧ್ಯಕ್ಷರು : ಶ್ರೀನಿವಾಸಪುರದ ವಿಚಾರವನ್ನು ನಾನು ಇಲ್ಲಿ ಮಾತನಾಡುವಂತಿಲ್ಲ, ನನ್ನ ಕ್ಷೇತ್ರದ ಎಲ್ಲಾ ಸಮಸ್ಯೆಗಳ ಬಗ್ಗೆ ತಾವು ಮಾತನಾಡಬೇಕು. ದಯವಿಟ್ಟು ತಾವು ತಮ್ಮ ಸ್ಥಾನಕ್ಕೆ ಹಿಂದಿರುಗಬೇಕು.

(ಗೊಂದಲ)

ಶ್ರೀ ಜೆ.ಹೆಚ್. ಪಟೇಲ್ : ಮಾನ್ಯ ವಾಟಾಳ್ ನಾಗರಾಜ್‌ರವರು ಸಹಕರಿಸಬೇಕು. ಕುಡಿಯುವ ನೀರಿನ ಯಾವುದೇ ಕಷ್ಟವಿದ್ದರೂ ಅದನ್ನು ಆದಷ್ಟು ಬೇಗನೆ ಬಗೆಹರಿಸುತ್ತೇವೆಂದು ಹೇಳಿದ್ದೇವೆ. ಅದನ್ನು ಮಾಡುತ್ತೇವೆ. ಹಿಂದೆ ಆಗಿರುವುದು ಆಗಿ ಹೋಗಿದೆ. ತಡ ಆಗಿರಬಹುದು. ತಮಗೆ ಕೋಪ ಬಂದಿರುವುದಕ್ಕೆ ಕಾರಣ ಇದೆ. ಆದರೆ ಈಗ ಆ ತಮ್ಮ ಕೋಪವನ್ನು ಮುಂದುವರೆಸುವುದು ಬೇಡ. ಸರ್ಕಾರ ತಮ್ಮ ನೋವನ್ನು ಮಾತ್ರ ಅರ್ಥಮಾಡಿಕೊಂಡಿರುವುದಿಲ್ಲ, ಇಡೀ ರಾಜ್ಯದ ಎಲ್ಲಾ ಭಾಗಗಳ ನೋವನ್ನೂ ಅರ್ಥಮಾಡಿಕೊಂಡಿದೆ. ಅದನ್ನು ಪರಿಹಾರ ಮಾಡುತ್ತದೆ. ನಾವು ಮೊದಲು ಬಂದ ತಕ್ಷಣ ಶಿವಮೊಗ್ಗಾ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ 5 ಕೋಟಿ ರೂ.ಗಳನ್ನು ಕೊಟ್ಟಿದ್ದರೆ ಆ ಸಮಸ್ಯೆ ಬಗೆಹರಿದುಹೋಗುತ್ತಿತ್ತು. ನಾನು ಸಂಬಂಧಪಟ್ಟ ಶಾಸಕರನ್ನು, ವಿಧಾನ ಪರಿಷತ್ತಿನ ಸದಸ್ಯರನ್ನು, ಡೆಪ್ಯುಟಿ ಕಮೀಷನರ್‌ರವರನ್ನು, ಕಾರ್ಪೊರೇಷನ್‌ನ ಸಂಬಂಧಪಟ್ಟವರನ್ನೂ ಕರೆಯಿಸಿ ಅವರಿಗೆ ಹೇಳಿ ಒಂದು ಸಮಯವನ್ನು ನಿಗದಿಪಡಿಸಿದ್ದೇನೆ. ಇದು ಮಾನ್ಯ ಶಾಸಕರಿಗೆ ಗೊತ್ತಿದೆ. ಆ ನಿಗದಿತ ಸಮಯದೊಳಗೆ ಶಿವಮೊಗ್ಗಾ ನಗರಕ್ಕೆ ನೀರು ಸಪ್ಲೈ ಮಾಡಿಯೇ ತೀರಬೇಕೆಂದು ಹೇಳಿದ್ದೇನೆ. ಅವರು ಸುಮಾರು 4-5 ತಿಂಗಳ ಕಾಲಾವಕಾಶವನ್ನು ತೆಗೆದುಕೊಂಡಿದ್ದಾರೆ. ಇಷ್ಟು ವರ್ಷಗಳವರೆಗೆ ಸುಮ್ಮನಿದ್ದೀರಿ, ಇನ್ನು ಅವರು ಕೇಳಿರುವ 5 ತಿಂಗಳ ಸಮಯವನ್ನು ಕೊಡುವುದಕ್ಕೆ ಆಗುವುದಿಲ್ಲವೆ? ಸಮಯ ಕೊಟ್ಟಿದ್ದೇವೆ. ಅವರು ಅಷ್ಟರಲ್ಲಿ ಮಾಡದೇ ಹೋದರೆ ಮತ್ತೆ ಶಾಸಕರನ್ನು ಕರೆಯಿಸಿ ಮಾತನಾಡುತ್ತೇನೆ. ತಮ್ಮನ್ನೂ ಕರೆಯಿಸಿಕೊಂಡು ಮಾತನಾಡುತ್ತೇನೆ.

ಅಧ್ಯಕ್ಷರು : ತಾವು ದಯವಿಟ್ಟು ಕರೆಯಿಸಿ ಮಾತನಾಡಿ. ದಯವಿಟ್ಟು ತಮ್ಮ ಸ್ಥಾನಕ್ಕೆ ಹೋಗಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಮಂತ್ರಿಗಳು ಈ ಕೆಲಸವನ್ನು ಮಾಡಿಕೊಡುತ್ತೇನೆಂದು ಹೇಳಿದ್ದಾರೆ.

(ಈ ಹಂತದಲ್ಲಿ ವಾಟಾಳ್ ನಾಗರಾಜ್‌ರವರು ತಮ್ಮ ಸ್ಥಾನಕ್ಕೆ ವಾಪಸು ಹೋದರು.)

ಶ್ರೀ ವಾಟಾಳ್ ನಾಗರಾಜ್ : ನನ್ನ ಉದ್ದೇಶ ಏನೆಂದರೆ, ಚಾಮರಾಜ ನಗರವೂ ಸೇರಿದಂತೆ 18 ಯೋಜನೆಗಳ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ? ಕೇವಲ ಚಾಮರಾಜ ನಗರ ಮಾತ್ರವಲ್ಲ ಅದರಲ್ಲಿ ಶಿವಮೊಗ್ಗಾ, ಮೈಸೂರುಗಳೂ ಕೂಡ ಸೇರುತ್ತವೆ. ಶ್ರೀನಿವಾಸಪುರಕ್ಕೆ ಕುಡಿಯುವ ನೀರಿನ ಅಭಾವವಿದೆ ಎಂಬುದು ನನಗೂ ಗೊತ್ತಿದೆ. ಏಕೆಂದರೆ ಹಿಂದೆ ಚಿಕ್ಕ ರೈಲಿನ ಬಗ್ಗೆ ನಾನು ಹೋರಾಟ ಮಾಡುವಾಗ ತಮ್ಮ ಊರಿನ ಹೋಟೆಲ್‌ಗಳಲ್ಲಿ ತಿಂಡಿ ತಿಂದಿದ್ದೇನೆ. ಅಲ್ಲಿ ಅನೇಕ ಬಾರಿ ತಂಗಿದ್ದೇನೆ. ನಿಮ್ಮ ಪರಿಸ್ಥಿತಿ ನನಗೆ ಅರ್ಥವಾಗಿದೆ. ನಿಮ್ಮ ಕ್ಷೇತ್ರದ ಪರವಾಗಿ ಕೂಡ ನನ್ನ ಒತ್ತಾಯ ಇದೆ ಎಂಬುದನ್ನು ಈ ಸಂದರ್ಭದಲ್ಲಿ ತಿಳಿಸುತ್ತಿದ್ದೇನೆ ತಮಗೇನಾದರೂ ಅನ್ಯಾಯ ಆದರೆ ಅದನ್ನು ನನಗೆ ಮೊದಲೇ ತಿಳಿಸಿದರೆ ತಮ್ಮ

ಪರವಾಗಿ ನಾನು ಧರಣಿ ಮಾಡುತ್ತೇನೆ. ಇದಕ್ಕೆ ನನ್ನ ತಕರಾರು ಏನೂ ಇಲ್ಲ. ನಾನು ತಮ್ಮ ಮೂಲಕ ಮಾನ್ಯ ಹಣಕಾಸಿನ ಮಂತ್ರಿಗಳಾದ ಸಿದ್ದರಾಮಯ್ಯನವರಲ್ಲೂ ಮತ್ತು ಮಾನ್ಯ ಉಪ ಮುಖ್ಯ ಮಂತ್ರಿಗಳಲ್ಲೂ ವಿನಂತಿ ಮಾಡಿಕೊಳ್ಳುತ್ತೇನೆ. ದಯವಿಟ್ಟು ಆದಷ್ಟು ಬೇಗ ಈ ಕೆಲಸವನ್ನು ಮಾಡಿಸಿಕೊಡಿ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಕಾವೇರಿ ನದಿಗೆ ಸಂಬಂಧಪಟ್ಟಂತೆ ಮತ್ತು ಇನ್ನೂ ಕೆಲವು ಕುಡಿಯುವ ನೀರಿನ ವ್ಯವಸ್ಥೆಗೆ ಸಂಬಂಧಪಟ್ಟಂತೆ ಸುಮಾರು 17 ಯೋಜನೆಗಳಿಗೆ ಮಂಜೂರಾತಿಯನ್ನು ತೆಗೆದುಕೊಂಡಿರುವ ವಿಚಾರದ ಬಗ್ಗೆ ಹೇಳಿದ್ದಾರೆ. ಆದರೆ ಕೆಲವು ನಗರಗಳಲ್ಲಿ ಇನ್ನು ಕೂಡ ಈ ಸಮಸ್ಯೆ ಇದೆ. ಕೆಲವು ಯೋಜನೆಗಳು ಮೊದಲನೆಯ ಹಂತ, 2ನೇ ಹಂತ ಎಂದು ಅನುಮೋದನೆ ಮಾಡುವ ಹಂತದಲ್ಲಿದೆ. ಅರ್ಬನ್ ಡೆವಲಪ್‌ಮೆಂಟ್ ಮಂತ್ರಿಗಳು ಸಂಬಂಧಪಟ್ಟವರ ಮೀಟಿಂಗ್‌ನ್ನು ಏತಕ್ಕೆ ಮಾಡುತ್ತಿಲ್ಲವೋ ಗೊತ್ತಿಲ್ಲ. ಉದಾಹರಣೆಗೆ ಹೇಳುವುದಾದರೆ ಬಿಜಾಪುರದ ಯೋಜನೆಗೆ ಒಂದುಸಾರಿ 5 ಕೋಟಿ ರೂ.ಗಳನ್ನು ಕೊಟ್ಟಮೇಲೆ ಮತ್ತೆ ಅದರ ಕಡೆ ನೋಡಲಿಲ್ಲ. ಅದೇ ರೀತಿ ಗುಲ್ಬರ್ಗಾದ ಎರಡನೇ ಹಂತ 25 ಕೋಟಿ ರೂಪಾಯಿಗಳದ್ದು ಅದು ಸುಮಾರು 9 ತಿಂಗಳ ಹಿಂದೆ ಕ್ಯಾಬಿನೆಟ್‌ಗೆ ಬಂದು ಅಪ್ರೂವ್ ಆಗುವಹಂತಕ್ಕೆ ಬಂದಿದರೂ ಇನ್ನೂ ಅದು ಅಪ್ರೂವ್ ಆಗದೆ ಕೆಲಸ ಪ್ರಾರಂಭ ಆಗುತ್ತಿಲ್ಲ. ಇದೇ ರೀತಿ ಬೀದರ್‌ನದೂ ಕೂಡ ಅಲ್ಲಿಗೆ ಮಾನ್ಯ ಮುಖ್ಯಮಂತ್ರಿಗಳು ಹೋಗಿ ಅಡಿಗಲ್ಲು ಸಮಾರಂಭ ಮಾಡಿ ಬಂದರು. ಇದಕ್ಕೆ ನಿರ್ದಿಷ್ಟವಾಗಿ ಹಣದ ವ್ಯವಸ್ಥೆ ಮಾಡಬೇಕಾಗುತ್ತದೆ. ಯಾವ ಯಾವ ನಗರಗಳಲ್ಲಿ ಕುಡಿಯುವ ನೀರಿನ ಸಮಸ್ಯೆಗಳಿವೆ ಅದಕ್ಕೋಸ್ಕರವೇ ಒಂದು ವಿಶೇಷವಾದ ಮೀಟಿಂಗ್ ಕರೆದು ಯಾವ ರೀತಿಯ ಪ್ರೋಗ್ರಾಂನ್ನು ಹಾಕಿಕೊಳ್ಳಬೇಕೆಂದು ಯೋಚನೆ ಮಾಡಿದರೆ ಅನುಕೂಲವಾಗುತ್ತದೆ.

ಇಲ್ಲದೇ ಹೋದರೆ ಎಲ್ಲಿ ಒತ್ತಾಯ ಇರುತ್ತದೆ ಅಲ್ಲಿ ಅದನ್ನು ಮಾಡುವುದು ಬೇಡ. ನೀಡ್ ಬೇಸ್ಡ್ ಕಾರ್ಯಕ್ರಮ ತೆಗೆದುಕೊಂಡರೆ ಬಹಳ ಅನುಕೂಲವಾಗುತ್ತದೆ. ತಕ್ಷಣ ಇದರ ಬಗ್ಗೆ ಒಂದು ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

(ಗೊಂದಲ)

ಶ್ರೀ ಸಿ.ಆರ್. ಸಗೀರ್ ಅಹ್ಮದ್ : ಮಾನ್ಯ ಅಧ್ಯಕ್ಷರೆ, ಹಿರಿಯ ಸದಸ್ಯರಾದ ಮಾನ್ಯ ವಾಟಾಳ್ ನಾಗರಾಜ್‌ರವರದ್ದು ಒಂದು ರೀತಿಯ ಸಮಸ್ಯೆಯಾಗಿದ್ದರೆ, ನನ್ನದೇ ಒಂದು ರೀತಿಯ ವಿಚಿತ್ರ ಸಮಸ್ಯೆ ಇದೆ. ಅದನ್ನು ಇಲ್ಲಿ ತಮ್ಮಲ್ಲಿ ವಿನಂತಿಸಿಕೊಳ್ಳದೇ ಹೋದರೆ ನನಗೆ ಬೇರೆ ಯಾವುದೇ ವೇದಿಕೆಯಾಗಲಿ, ಅವಕಾಶವಾಗಲಿ ಸಿಕ್ಕುವುದಿಲ್ಲ. ಆದ್ದರಿಂದ ನಾನು ತಮ್ಮಲ್ಲಿ ಬೇಡಿಕೊಳ್ಳುತ್ತೇನೆ.

ಅಧ್ಯಕ್ಷರು : ನಿಮ್ಮ ವಿಚಿತ್ರ ಸಮಸ್ಯೆ ಏನು ಹೇಳಿ.

ಶ್ರೀ ಸಿ.ಆರ್. ಸಗೀರ್ ಅಹ್ಮದ್ : ತಾವು ನನಗೆ ಅವಕಾಶವನ್ನು ಕೊಡಬೇಕು. ಏಕೆಂದರೆ ಯಗಚಿ ಜಲಾಶಯದಿಂದ ಚಿಕ್ಕಮಗಳೂರು ಪಟ್ಟಣಕ್ಕೆ ಕುಡಿಯುವ ನೀರನ್ನೊದಗಿಸಿಕೊಡುವ ವಿಚಾರದಲ್ಲಿ ನನಗೆ ಅನುಮಾನ ಉಂಟಾಗಿದೆ. ಕಾರಣ, ಜ್ಯಾಕ್‌ವೆಲ್ ಮತ್ತು ಇನ್‌ಟೆಕ್ ವೆಲ್‌ನ್ನು ನಿರ್ಮಿಸುವ ಸಲುವಾಗಿ ರಾಜ್ಯಸರ್ಕಾರ 23-12-94ರಲ್ಲಿ 63ಲಕ್ಷ ರೂ.ಗಳನ್ನು ಕೆ.ಯು.ಡಬ್ಲ್ಯೂ.ಎಸ್.ಎಸ್.ಬಿ.ಗೆ ಒದಗಿಸಿಕೊಟ್ಟಿದ್ದರೂ ಕೂಡ ಇದುವರೆಗೂ ಸರ್ಕಾರದವರು ಅದರ ಬಗ್ಗೆ ಟೆಂಡರ್‌ನ್ನು ಕರೆದಿಲ್ಲ ಇದರಿಂದಾಗಿ ಅಲ್ಲಿನ ಜನರು ಏನು ಮಾತನಾಡುತ್ತಿದ್ದಾರೆಂದರೆ, ಯಗಚಿ ಜಲಾಶಯವನ್ನು ಕೇವಲ

ನೀರಾವರಿಗಾಗಿ ಮೀಸಲಿಟ್ಟಿರುವುದರಿಂದ ಚಿಕ್ಕಮಗಳೂರು ಪಟ್ಟಣಕ್ಕೆ ಇದರಿಂದ ಕುಡಿಯುವ ನೀರನ್ನು ಒದಗಿಸಿಕೊಡಲು ಸಾಧ್ಯವಿಲ್ಲ ಎಂಬ ಊಹಾಪೋಹಗಳನ್ನು ಎಬ್ಬಿಸಿರುವುದರಿಂದ ಈಗ ಇಲ್ಲಿ ಮಾನ್ಯ ಉಪ ಮುಖ್ಯಮಂತ್ರಿಗಳು ಹಾಜರಿರುವುದರಿಂದ ದಯವಿಟ್ಟು ಒಂದು ಆಶ್ವಾಸನೆಯನ್ನು ಕೇವಲ ನನಗೆ ಮಾತ್ರವಲ್ಲದೆ ಚಿಕ್ಕಮಗಳೂರು ಪಟ್ಟಣದಲ್ಲಿರುವ ಎಲ್ಲಾ ನಾಗರೀಕರಿಗೂ ಕೊಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಮಂಜುನಾಥ ಸಿ. ಕುನ್ನೂರ್ : ಮಾನ್ಯ ಅಧ್ಯಕ್ಷರೆ ಇದರ ಜೊತೆಯಲ್ಲಿ ನಮ್ಮ ಶಿಗ್ಗಾಂ ಪಟ್ಟಣದ ಕುಡಿಯುವ ನೀರಿನ ಯೋಜನೆ ಅಪೂರ್ಣವಾಗಿದೆ ಅದರ ಬಗ್ಗೆಯೂ ಕೂಡ ಗಮನ ಹರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ತಾವು ಹೇಳಿರುವುದರಲ್ಲಿ ಬಹಳ ಉತ್ತಮ ಅಂಶ ಅಡಗಿದೆ.

ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಈಗಾಗಲೇ ನಾನು ಸ್ಪಷ್ಟಪಡಿಸಿದ ಹಾಗೆ ನಮಗೆ ಬೇರೆ ಯಾವುದೇ ಕೆಲಸಕ್ಕೆ ಹಣದ ತೊಂದರೆಯಾದರೂ ಕೂಡ ಕುಡಿಯುವ ನೀರಿನ ವ್ಯವಸ್ಥೆಗೆ ಹಣದ ಕೊರತೆ ಇಲ್ಲ. ಮಾನ್ಯ ಹಣಕಾಸಿನ ಮಂತ್ರಿಗಳೂ ಹೇಳಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳೂ ಕೂಡ ಹೇಳಿದ್ದಾರೆ. ತಮ್ಮ ಸಲಹೆಯನ್ನು ನಾನು ಒಪ್ಪುತ್ತೇನೆ. ಈ ಸಮಸ್ಯೆ ಯಾವುದೇ ಜಿಲ್ಲೆಗೆ ಯಾವುದೇ ನಗರಕ್ಕೆ ಸಂಬಂಧಪಟ್ಟಂತೆ ಇರಲಿ. ಅದಕ್ಕೆ ಸಂಬಂಧಪಟ್ಟ ಅಧಿಕಾರಿಗಳನ್ನು ರಾಜ್ಯಮಟ್ಟದಲ್ಲಿ ಕರೆದು ಅಂದರೆ ಅದು ಪುರಸಭೆ ಇರಬಹುದು ಕಾರ್ಪೋರೇಷನ್ ಇರಬಹುದು. ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳನ್ನೂ ಕರೆದು ಕೇವಲ ನಿರ್ದೇಶನ ನೀಡುವುದಲ್ಲ, ಅದಕ್ಕೆ ಅವಶ್ಯಕವಾಗಿ ಬೇಕಾದ ಹಣವನ್ನೂ ಕೂಡ ಬಿಡುಗಡೆ ಮಾಡುತ್ತೇವೆ. ಕುಡಿಯುವ ನೀರನ್ನೊದಗಿಸುವ ವಿಚಾರದಲ್ಲಿ ಈ ಸರ್ಕಾರ ಸಂಪೂರ್ಣ ಜವಾಬ್ದಾರಿಯನ್ನು ತೆಗೆದುಕೊಳ್ಳುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಬಂದಮೇಲೆ ಸಚಿವ ಸಂಪುಟದ ಎಲ್ಲಾ ಮಂತ್ರಿಗಳೂ ಅಂದರೆ ಹಣಕಾಸಿನ ಮಂತ್ರಿಗಳನ್ನು ಒಳಗೊಂಡಂತೆ ಎಲ್ಲಾ ಅಧಿಕಾರಿಗಳ ಒಂದು ಸಭೆಯನ್ನು ಕರೆದು ತೀರ್ಮಾನ ತೆಗೆದುಕೊಳ್ಳುತ್ತೇವೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಸಂಬಂಧಪಟ್ಟ ಸಚಿವರಾದ ವೈಜನಾಥ ಪಾಟೀಲರಿಗೆ ಈ ವಿಚಾರ ಗೊತ್ತಿದೆ. ಈಗ ಅವರು ಸಭೆಗೆ ಬಂದಿದ್ದಾರೆ. ಚಾಮರಾಜ ನಗರದ್ದೂ ಸೇರಿದಂತೆ ರಾಜ್ಯದ 18 ಯೋಜನೆಗಳ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದಾರೆ, ಕಾಂಟ್ರಾಕ್ಟರ್‌ಗಳ ಬೇಡಿಕೆಗಳು ಏನು ಇದರ ಬಗ್ಗೆ ವಿವರಣೆಯನ್ನು ನೀಡಬೇಕಾಗಿ ವಿನಂತಿ.....

ಅಧ್ಯಕ್ಷರು : ದಯವಿಟ್ಟು ಕುಳಿತುಕೊಳ್ಳಿ. ಅಮೇಲೆ ನಿಮಗೇ ಮಾತನಾಡುವುದಕ್ಕೆ ಸಮಯ ಸಿಕ್ಕುವುದಿಲ್ಲ, ವೈಜನಾಥ ಪಾಟೀಲರನ್ನು ಅನಂತರ ಕೂಡಿಸಿಕೊಂಡು ಮಾತನಾಡಬಹುದು. ವೈಜನಾಥ ಪಾಟೀಲರೆ, ನಾವೇ ಎಲ್ಲವನ್ನೂ ಸೆಟಲ್ ಮಾಡುತ್ತೇವೆ ಬಿಡಿ.

ಶ್ರೀ ವೈಜನಾಥ ಪಾಟೀಲ್ : ಅದಷ್ಟು ಬೇಗ ಈ ಸಮಸ್ಯೆಯನ್ನು ಬಗೆಹರಿಸುತ್ತೇವೆ.

11.10 ಎ.ಎಂ.

(ಅ) ಟಿ.ಸಿ.ಹೆಚ್, ಮತ್ತು ಬಿ.ಎಡ್ ವಿದ್ಯಾರ್ಥಿಗಳ ಪ್ರವೇಶ.

ಶ್ರೀ ಹೆಚ್.ಸಿ. ಬಾಲಕೃಷ್ಣ : ಸನ್ಮಾನ್ಯ ಅಧ್ಯಕ್ಷರೇ, ನಾನು ಪ್ರಾಥಮಿಕ ಶಿಕ್ಷಣ ಮಂತ್ರಿಗಳಲ್ಲಿ ಒಂದು ಸ್ಪಷ್ಟೀಕರಣವನ್ನು ಕೇಳಲಿಕ್ಕೆ ಇಚ್ಛಿಪಡುತ್ತೇನೆ. 1995-96ನೇ